ದಿನಾಂಕ: 13.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀಮತಿ ಟಿ ಎಸ್ ಜಿ ವಕೀಲರಿಂದಃ**

ನನ್ನ ಅಕ್ಕ ಗಂಗಮ್ಮ 09.03.2018 ರಂದು ಮೃತ ಪಟ್ಟಿದ್ದಾರೆ ಎಂದರೆ ನಿಜ. ಕೇಸ್ ಸಲ್ಲಿಸುವಾಗ ಗಂಗಮ್ಮ ಬದುಕಿದ್ದರು ಎಂದರೆ ಗೊತ್ತಿಲ್ಲ. ದಾವಾಸ್ತಿಗಳು ನನ್ನ ತಂದೆ ಹೆಸರಿನಲ್ಲಿ ಇದ್ದವು ಎಂದರೆ ನಿಜ. ನಮ್ಮ ತಂದೆಗೆ ಅವರ ತಂದೆಯಿಂದ ದಾವಾಸ್ತಿಗಳು ಬಂದಿವೆ. ನನ್ನ ತಂದೆ ಕುಟುಂಬದ ನಿರ್ವಹಣೆಗಾಗಿ, ದಾವಾಸ್ತಿಯ ಅಭಿವೃದ್ಧಿ ಮತ್ತು ಮಕ್ಕಳ ಮದುವೆಗೆ ಸುಮಾರು ರೂ.45 ಲಕ್ಷ ಖರ್ಚು ಮಾಡಿರುತ್ತಾರೆ. ಆ ಬಗ್ಗೆ ದಾಖಲೆಗಳು ಇರುವುದಿಲ್ಲ. ದಾವಾಸ್ತಿಯನ್ನು ಮಾರಾಟ ಮಾಡುವಾಗ ಈ ಎರಡು ಕೇಸ್ ಗಳು ಚಾಲ್ತಿಯಲ್ಲಿದ್ದ ವಿಚಾರ ನನಗೆ ಗೊತ್ತಿಲ್ಲ. ದಾವಾಸ್ತಿ ಮಾರಾಟ ಮಾಡುವಾಗ ಗಂಗಮ್ಮನ ಒಪ್ಪಿಗೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಗಂಗಮ್ಮನವರ ಸಹಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಅವರಿಗೆ ಸಹಿ ಮಾಡಲು ಬರುತ್ತಿರಲಿಲ್ಲ ಅವರು ಒಪ್ಪಿಗೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ಬಾಯಿ ಮಾತಿನಲ್ಲಿ ನನ್ನ ತಂದೆಗೆ ಒಪ್ಪಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಗಂಗಮ್ಮ ನನ್ನ ತಂದೆಗೆ ಒಪ್ಪಿಗೆ ಕೊಟ್ಟಿದ್ದರು ಎಂದು ನಿಪಿ-3 ರಲ್ಲಿ ನಮೂದಿಸಿರುತ್ತೇನೆ.

ಈ ದಾವೆಯಲ್ಲಿ ಸಲ್ಲಿಸಿರುವ ತಕರಾರಿನಲ್ಲಿ ಓಎಸ್ 10/2015 ರಲ್ಲಿ ನಾವು ರಾಜಿ ಮಾಡಿಕೊಂಡಿದ್ದೇವೆ ಎಂದು ತಿಳಿಸಿರುತ್ತೇನೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ 1/6 ಭಾಗ ಹಿಸ್ಸೆ ರಾಜೀ ಮೂಲಕ ಬಂದಿದೆ ಎಂದು ನಾನು ನನ್ನ ತಕರಾರಿನಲ್ಲಿ ಹೇಳಿದ್ದೇನೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಓಎಸ್ 10/15 ರಲ್ಲಿ ನಾನು ಸಲ್ಲಿಸಿದ ತಕರಾರಿನಲ್ಲಿ 1/6 ಹಿಸ್ಸೆಯನ್ನು ವಾದಿಗಳಿಗೆ ಕೊಡಲು ತಯಾರಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ 1/6 ಅಂಶ ಹಿಸ್ಸೆಯಲ್ಲಿ 1/3 ಅಂಶ ಹಿಸ್ತೆಯನ್ನುಪಡೆದುಕೊಂಡಿದ್ದೇನೆ ಎಂದು ನನ್ನ ತಕರಾರಿನಲ್ಲಿ ಹೇಳಿದ್ದೇನೆ ಎಂದರೆ ಸಾಕ್ಷಿ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅದು ನನ್ನ ತಂದೆಗೆ ಗೊತ್ತು ಎಂದು ನುಡಿಯುತ್ತರೆ. ನನ್ನ ತಂದೆ ಸಲ್ಲಿಸಿದ ಪ್ರತಿವಾದ ಪತ್ರದ ಅಂಶಗಳು ನನಗೆ ಗೊತ್ತಿಲ್ಲ ನ್ಯಾಯಾಲಯವು ದಾವಾಸ್ತಿಯನ್ನು ಮಾರಾಟ ಮಾಡಬಾರದು ಎಂದು ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡಿದ ವಿಚಾರ ನನಗೆ ಗೊತ್ತಿದ್ದರುಾ ಕೂಡ ನಾನು ಆಸ್ತಿಯನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ.

ವಾದಿಗಳಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಓಎಸ್ 57/14 ರ ದಾವೆಯ 4 ನೇ ಪ್ರತಿವಾದಿಯಿಂದ ಓಎಸ್ 10/2015 ರ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಹಿಸ್ಸೆ ಬರಬಾರದು ಎಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಪತ್ರವನ್ನು ಓದಿ ನೋಡಿರುವುದಿಲ್ಲ

**ಓಎಸ್ 10/2015 ರ ವಾದಿಯರು ತಮ್ಮ ಪಾಟೀ ಸವಾಲು ಇದೆ ಎಂದು ಸಮಯ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು